# ಕರ್ನಾಟಕ ಸರ್ಕಾರ– ರೇಷ್ಮೆ ಇಲಾಖೆ
## ಸಿಟಿಜನ್ ಚಾರ್ಟರ್
## ನಮ್ಮ ಧ್ಯೇಯೋದ್ದೇಶ

ರೇಷ್ಮೆ ಕೃಷಿ ಅಭಿವೃದ್ದಿಯ ಮೂಲಕ ಗ್ರಾಮಾಂತರ ಪ್ರದೇಶದ ನಿರುದ್ಯೋಗಿಗಳಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಒದಗಿಸುವುದು, ರೇಷ್ಮೆ ಗೂಡು ಬೆಳೆಯಲು ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ತೊಡಗಲು ಪ್ರೇರೇಪಿಸಿ ದೊರೆಯಬಹುದಾದ ಸೌಲಭ್ಯಗಳನ್ನು ನೀಡುವುದಲ್ಲದೆ ಹೊಸ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿ ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಆದಾಯ ಹೆಚ್ಚಿಸುವುದು. ಹಿಪ್ಪುನೇರಳೆ ವಿಸ್ತೀರ್ಣ, ರೇಷ್ಮೆ ಗೂಡು ಮತ್ತು ರೇಷ್ಮೆ ಉತ್ಪಾದನೆ ಹೆಚ್ಚಿಸಿ ನೇಕಾರರಿಗೆ ಅವಶ್ಯವಾದ ಪ್ರಮಾಣ ಮತ್ತು ಗುಣಮಟ್ಟದ ನೂಲು ಸರಬರಾಜಿನ ಮೂಲಕ ಗುಣಮಟ್ಟದ ಜವಳಿ ಉತ್ಪಾದಿಸಿ ರಫ್ತು, ವಿದೇಶಿ ವಿನಿಮಯ ಗಳಿಕೆ.

ಭಾರತದಲ್ಲಿ ಉತ್ಪಾದಿಸುವ ಒಟ್ಟು 16245 ಮೆಟ್ರಿಕ್ ಟನ್ ರೇಷ್ಮೆಯಲ್ಲಿ ಕರ್ನಾಟಕ ರಾಜ್ಯದಲ್ಲಿ 7238 ಮೆಟ್ರಿಕ್ ಟನ್ ರೇಷ್ಮೆ ಉತ್ಪಾದಿಸಲಾಗುತ್ತಿದೆ. ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ಮುಂಚೂಣಿ ಸ್ಥಾನದಲ್ಲಿದ್ದು ತನ್ನ ಉನ್ನತ ಸ್ಥಾನವನ್ನು ಉಳಿಸಿಕೊಳ್ಳುವುದರೊಂದಿಗೆ ಭಾರತ ದೇಶವು ಜಗತ್ತಿನಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವಂತೆ ನಿರ್ವಹಿಸುವುದು.

## ನಮ್ಮ ಮಹತ್ವ

ರೇಷ್ಮೆ ವ್ಯವಸಾಯದ ಅವಲಂಬಿತರಿಗೆ ಹೊಸ ತಾಂತ್ರಿಕತೆಗಳು ಹೊಸ ಹಿಪ್ಪುನೇರಳೆ ತಳಿಗಳು ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿಪಡಿಸಿ ನೀಡುವುದರೊಂದಿಗೆ ರೇಷ್ಮೆ ಉದ್ಯಮದ ಅಭಿವೃದ್ಧಿಯನ್ನು ಮಾಡಲು ಬದ್ಧರಾಗಿರುತ್ತೇವೆ.

## ನಮ್ಮ ಬದ್ಧತೆ

- ರೇಷ್ಮೆ ರೈತರೊಂದಿಗೆ ನೂಲು ಬಿಚ್ಚಾಣಿಕೆದಾರರೊಂದಿಗೆ ನೇಕಾರರೊಂದಿಗೆ ಹಾಗೂ ವ್ಯಾಪಾರಸ್ಥರೊಂದಿಗೆ ಸಮನ್ವಯತೆಯಿಂದ ಜವಾಬ್ದಾರಿಯುತವಾಗಿ ವ್ಯವಹರಿಸುವುದರೊಂದಿಗೆ ಅವರ ಹಕ್ಕುಗಳನ್ನು ಗೌರವಿಸುವುದು.
- ರೇಷ್ಮೆ ವ್ಯವಸಾಯದಲ್ಲಿ ತೊಡಗಿರುವವರಿಗೆ ಹಾಗೂ ರೇಷ್ಮೆ ವ್ಯವಸಾಯದ ಅವಲಂಬಿತರಿಗೆ ತರಬೇತಿ, ತಾಂತ್ರಿಕ ಸಲಹೆಯನ್ನು ಮತ್ತು ಸೌಲಭ್ಯಗಳ ಮಾಹಿತಿ ನೀಡುವುದಲ್ಲದೆ ಇತ್ತೀಚಿನ ತಾಂತ್ರಿಕತೆಗಳ ಬಗ್ಗೆ ಜ್ಞಾನವನ್ನು ನೀಡುವುದು.
- ಕ್ಷೇತ್ರಮಟ್ಟದಲ್ಲಿ ರೇಷ್ಮೆ ಅವಲಂಬಿತರ ಸಮಸ್ಯೆಗಳನ್ನು ಗುಂಪು ಚರ್ಚೆಗಳು, ಕಾರ್ಯಾಗಾರಗಳು,ಸಮಾವೇಶಗಳನ್ನು ಏರ್ಪಡಿಸುವುದರೊಂದಿಗೆ ನಿವಾರಣೋಪಾಯಗಳನ್ನು ನೀಡುವುದು. ರೇಷ್ಮೆ ಅಭಿವೃದ್ಧಿ ಕುರಿತು ಮುಕ್ತ ಮನಸ್ಸಿನಿಂದ ಅವರು ನೀಡುವ ಸಲಹೆ ಸೂಚನೆಗಳನ್ನು ಸ್ವಾಗತಿಸುವುದು.
- ಕ್ಷೇತ್ರಮಟ್ಟದ ಸಮಸ್ಯೆಗನ್ನು ಅರಿತು ಅವುಗಳನ್ನು ನಿವಾರಿಸಲು ವಿಭಾಗ ಮಟ್ಟದ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯನ್ನು ಪ್ರತಿ ತಿಂಗಳು ಏರ್ಪಡಿಸುವುದು.
- ರೇಷ್ಮೆ ವ್ಯವಸಾಯದ ಅವಲಂಬಿತರಿಗೆ " ರೇಷ್ಮೆ ಕೃಷಿ' ತ್ರೈಮಾಸಿಕ ಪತ್ರಿಕೆಯ ಮೂಲಕ ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡುವುದು.

- ರೇಷ್ಮೆ ವ್ಯವಸಾಯಗಾರರನ್ನು ಹಾಗೂ ರೇಷ್ಮೆ ನೂಲು ಬಿಚ್ಚಾಣಿಕೆದಾರರನ್ನೊಳಗೊಂಡ ಮಾರುಕಟ್ಟೆ ಹಾಗೂ ವಿನಿಮಯ ಕೇಂದ್ರದ ಸಮಿತಿಗಳನ್ನು ರಚಿಸಿ ಇವರ ಸಮಸ್ಯೆಗಳನ್ನು ಸಮಿತಿಯ ಮೂಲಕ ಇತ್ಯರ್ಥಗೊಳಿಸುತ್ತೇವೆ.
- ರಾಜ್ಯದಲ್ಲಿ ಉತ್ಪಾದಿಸಿದ ರೇಷ್ಮೆ ಗೂಡುಗಳ ಮಾರಾಟ ವ್ಯವಸ್ಥೆಗಾಗಿ ಸುಸಜ್ಜಿತ ಮಾರುಕಟ್ಟೆಗಳನ್ನು ಹೊಂದಿರುತ್ತೇವೆ. ಅಲ್ಲದೇ ರೈತರು ಬೆಳೆದ ಗೂಡಿಗೆ ಗೂಡು ಮಾರಾಟವಾಗುವ ಮತ್ತು ನ್ಯಾಯಯುತವಾದ ಬೆಲೆ ಬಹಿರಂಗ ಹರಾಜು ಮೂಲಕ ದೊರೆಯುವಂತೆ ಮಾಡುವ ವ್ಯವಸ್ಥೆಗಳನ್ನು ಹೊಂದಿರುತ್ತೇವೆ.
- ರೇಷ್ಮೆ ನೂಲಿನ ಮರಾಟ ವ್ಯವಸ್ಥೆಗಾಗಿ ರೇಷ್ಮೆ ವಿನಿಮಯ ಕೇಂದ್ರವನ್ನು ಹೊಂದಿರುತ್ತೇವೆ.

## ಸಾಮಾನ್ಯ ಕಾರ್ಯವಿಧಾನ

ರೇಷ್ಮೆ ಅವಲಂಬಿತರಿಂದ ಅಹವಾಲುಗಳು ಬಂದಲ್ಲಿ ಶೀಘ್ರವಾಗಿ ಇತ್ಯರ್ಥಗೊಳಿಸಲಾಗುವುದು. ಸಾಧ್ಯವಾಗದಿದ್ದಲ್ಲಿ ವಿಳಂಬಕ್ಕೆ ಕಾರಣಗಳನ್ನು ಸಂಬಂಧಿಸಿದವರಿಗೆ ತಿಳಿಸಲಾಗುವುದು.

## ರೇಷ್ಮೆ ವ್ಯವಸಾಯದ ಅವಲಂಬಿತರ ಕರ್ತವ್ಯಗಳು

ರೇಷ್ಮೆ ವ್ಯವಸಾಯದ ಅವಲಂಬಿತರು ತಮ್ಮ ಸಮಸ್ಯೆಗಳನ್ನು ಇಲಾಖೆಯ ಗಮನಕ್ಕೆ ತಂದಲ್ಲಿ ತಾಂತ್ರಿಕ ಪರಿಣಿತರನ್ನು ಕ್ಷೇತ್ರಕ್ಕೆ ಕಳುಹಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇವೆ. ಸಮಸ್ಯೆ ಸಾಮಾನ್ಯವಾಗಿರದಿದ್ದಲ್ಲಿ, ಹಿರಿಯ ಅಧಿಕಾರಿಗಳೊಂದಿಗೆ ಹಾಗೂ ವಿಜ್ಞಾನಿಗಳೊಂದಿಗೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು.

ಸುಧಾರಣೆಯು ನಿರಂತರ ಕ್ರಮವಾಗಿದ್ದು, ಅವಲಂಭಿತರಲ್ಲಿ ಉದ್ಭವಿಸುವ ಸಮಸ್ಯೆಗಳ ಹಾಗೂ ಸಲಹೆಗಳ ಆಧಾರದ ಮೇಲೆ ಉತ್ತಮ ಸೇವೆಯನ್ನು ನೀಡುವ ಮೂಲಕ ಸಮಸ್ಯೆಗಳನ್ನು ಬಗೆಹರಿಸಲಾಗುವುದು.

## ಸಲಹೆ ಮತ್ತು ಸಹಾಯ

1. ಮೂಲ ತಳಿ ಬಿತ್ತನೆ ಗೂಡುಗಳ ಉತ್ಪಾದನೆ ಮತ್ತು ನಿರ್ವಹಣೆಗಾಗಿ 1 ಪಿ4, 12 ಪಿ3, 15 ಪಿ2 ಮತ್ತು 62 ಪಿ1/ಚಾಕಿ ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ.
2. ರೇಷ್ಮೆ ವ್ಯವಸಾಯಗಾರರಿಗೆ ತರಬೇತಿ, ತಾಂತ್ರಿಕ ಸಲಹೆ, ಸೂಚನಗಳನ್ನು ನೀಡಲು ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯದಲ್ಲಿ ಒಟ್ಟು 246 ತಾಂತ್ರಿಕ ಸಲಹಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
3. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ತರಬೇತಿ, ತಾಂತ್ರಿಕ ಸಲಹೆ, ಸೂಚನೆಗಳನ್ನು ನೀಡಲು ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯದಲ್ಲಿ ಒಟ್ಟು 17 ರೀಲಿಂಗ್ ತಾಂತ್ರಿಕ ಸಲಹಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
4. ರೇಷ್ಮೆ ವ್ಯವಸಾಯಗಾರರಿಗೆ ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ಸರಬರಾಜು ಮಾಡಲು ರಾಜ್ಯದಲ್ಲಿ ಒಟ್ಟು 63 ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳು ಕಾರ್ಯ ನಿರ್ವಹಿಸುತ್ತವೆ.

ಅಲ್ಲದೆ ಕೇಂದ್ರ ರೇಷ್ಮೆ ಮಂಡಳಿಯ ಬಿತ್ತನೆ ಕೋಠಿಗಳು, 326 ಖಾಸಗಿ ಬಿತ್ತನೆ ಕೋಠಿಗಳಿಗೆ ರೇಷ್ಮೆ ಮೊಟ್ಟೆ ಉತ್ಪಾದಿಸಲು ಪರವಾನಿಗೆ ನೀಡಲಾಗಿದೆ.

5. ರೇಷ್ಮೆ ಬೆಳೆಗಾರರು ಬೆಳೆದ ಗೂಡುಗಳ ಮಾರಾಟಕ್ಕೆ ಒಟ್ಟು 66 ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪಿಸಿ, ಈ ಮಾರುಕಟ್ಟೆಗಳಿಗೆ ಸೂಕ್ತ ಕಟ್ಟಡಗಳು, ನಿಖರವಾದ ತೂಕಕ್ಕಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳು, ಗೂಡಿನ ಶೇಖರಣೆಗೆ ಬಿನ್‌ಗಳು, ತೂಕ ಮಾಡಲು ಕ್ರೇಟ್‌ಗಳನ್ನು ಸರಬರಾಜು ಮಾಡಿ ಪಾರದರ್ಶಕ ವಹಿವಾಟಿನ ವ್ಯವಸ್ಥೆ ಮಾಡಲಾಗಿದೆ.

6. ಬಿತ್ತನೆ ವಲಯಗಳಲ್ಲಿ ರೋಗರಹಿತ ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಮತ್ತು ರೋಗಗಳನ್ನು ನಿಯಂತ್ರಿಸಲು ಸೋಂಕು ನಿವಾರಣಾ ದಳಗಳು ಕೆಲಸ ನಿರ್ವಹಿಸುತ್ತಿವೆ.

7. ರೇಷ್ಮೆ ವ್ಯವಸಾಯಗಾರರಿಗೆ ತರಬೇತಿ ನೀಡಲು ರಾಜ್ಯದಲ್ಲಿ ಒಟ್ಟು 6 ರೇಷ್ಮೆ ತರಬೇತಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದೆ.

8. ರಾಜ್ಯದಲ್ಲಿ ಉತ್ಪಾದಿಸಿದ ರೇಷ್ಮೆ ಮಾರಾಟ ಮಾಡಲು ನೇಕಾರಿಕೆಯ ಪ್ರಮುಖ 10 ಸ್ಥಳಗಳಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

9. ರೇಷ್ಮೆ ಉದ್ಯಮದ ಚಟುವಟಿಕೆಗಳನ್ನು ಪ್ರಾರಂಭಿಸಲು/ಉತ್ತಮಪಡಿಸಲು ಇಲಾಖೆಯಿಂದ ಸಹಾಯಧನ/ಪ್ರೋತ್ಸಾಹಧನ, ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

10. ರಾಜ್ಯದಲ್ಲಿ 5 ರೇಷ್ಮೆ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ.

11. ಹೊಸ ಹಿಪ್ಪುನೇರಳೆ ತಳಿಗಳು, ರೇಷ್ಮೆ ಹುಳುವಿನ ತಳಿಗಳು, ಹೊಸ ತಾಂತ್ರಿಕತೆಗಳ ಅಭಿವೃದ್ಧಿಗೆ ಸಂಶೋಧನಾ ಕೇಂದ್ರಗಳೊಂದಿಗೆ ಸಮನ್ವಯತೆ ಸಾಧಿಸಿ ಹೊರಬಂದ ಯಶಸ್ವಿ ತಾಂತ್ರಿಕತೆಗಳನ್ನು ಭಾಗಿದಾರರಿಗೆ ತಿಳಿಸಲಾಗುತ್ತಿದೆ.

**ಸಂಪರ್ಕಿಸುವ ವಿಳಾಸ**

**ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು**
**ಹಾಗೂ ರೇಷ್ಮೆ ನಿರ್ದೇಶಕರು**
**5ನೇ ಮಹಡಿ, ಬಹು ಮಹಡಿಗಳ ಕಟ್ಟಡ**
**ಡಾ:ಅಂಬೇಡ್ಕರ್ ವೀದಿ,**
**ಬೆಂಗಳೂರು-560001**
**ದೂರವಾಣಿ ಸಂ:080-22252611**

**Email : karseri@yahoo.com.**
**comm-seri-ka@nic.in**